ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೨ನೇ ವರ್ಷ ೮ನೇ ಸಂಚಿಕೆ ಭಾನುವಾರ ೯-೧೦-೧೯೮೩ ಕೊಪ್ಪ ಬೆಲೆ ೪೦ ಪೈಸೆ

ಕಾಂಪೋಸ್ಟ್ ತಯಾರಿಕೆ ತರಬೇತಿ ಸಪ್ತಾಹ

ಉತ್ತಮೇಶ್ವರ: ಕಳೆದ ವರ್ಷದಂತೆ ಈ ವರ್ಷವೂ ಕೊಪ್ಪ ತಾ|| ಕೃಷಿ ಇಲಾಖೆಯು ಮ. ಗಾಂಧೀ ಜಯಂತಿಯಿಂದ ಒಂದು ವಾರ ಕಾಲ ತಾಲ್ಲೂಕಿನ ವಿವಿಧೆಡೆ ನಡೆಯುವ (ಕಾಂಪೋಸ್ಟ್) ಗೊಬ್ಬರ ತಯಾರಿಕೆಯ ತರಬೇತಿ ಕಾರ್ಯಕ್ರಮ ಯೋಜಿಸಿದ್ದು, ಅದರ ಉದ್ಘಾಟನೆಯನ್ನು ಅ. ೨ ರಂದು ಇಲ್ಲಿ ಶಾಸಕ ಗೋವಿಂದ ಗೌಡರು ಬಿ. ಜಿ. ಚಿದಂಬರ್ ಅಧ್ಯಕ್ಷತೆಯಲ್ಲಿ ನೆರವೇರಿಸಿ, ೩೫ ಜನ ಹರಿಜನ-ಗಿರಿಜನರಿಗೆ ಉಚಿತ ವ್ಯವಸಾಯ ಉಪಕರಣಗಳು, ಕೀಟನಾಶಕಗಳು ಮತ್ತು ಸಿಂಪರಣೆ ಯಂತ್ರಗಳನ್ನು ವಿತರಣೆ ಮಾಡಿದರು.

ಸಹಾಯಕ ಕೃಷಿ ನಿರ್ದೇಶಕ ಎ.ಎಸ್. ಸುಬ್ಬಯ್ಯ ಗೌಡ ಸಾವಯವ ಗೊಬ್ಬರದ ಗುಂಡಿ ತೋಡುವ ವಿಧಾನವನ್ನು ಸಕ್ರಿಯವಾಗಿ ವಿವರಿಸಿದರು. ಎ. ಬಿ. ವಾಸಪ್ಪ, ಕೆ. ಬಾಲಣ್ಣ ಗೌಡ, ಪಂಚಾಯ್ತಿ ಅಧ್ಯಕ್ಷ ಚಿನ್ನಯ್ಯ ಮಾತನಾಡಿದರು. ವಿ. ರಾಮರಾವ್ ವಂದಿಸಿದರು.

ತಮ್ಮಡವಳ್ಳಿ ಕೃಷಿ ಕಾಲೋನಿ ಕಾರ್ಯಕ್ರಮ

ಕೊಪ್ಪ: ಈ ತಾಲ್ಲೂಕಿನ ತಮ್ಮಡವಳ್ಳಿಯ ಹರಿಜನರಿಗೆ ಸೆ. ೩೦ರಂದು ತೆಂಗಿನಸಸಿ, ಕೃಷಿಉಪಕರಣ, ಹಾಗೂ ಹಣ್ಣಿನ ಗಿಡಗಳ ವಿತರಣಾ ಸಮಾರಂಭ ನಡೆಯಿತು.

ಕೊಪ್ಪ ತಾ.ಅ.ಮಂ. ಮಾಜಿ ಅಧ್ಯಕ್ಷ ಬಿ.ಜಿ.ಚಿದಂಬರ್‌ರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಕೆ.ನರಸಿಂಹಯ್ಯ, ಶಾಸಕ ಹೆಚ್.ಜಿ.ಗೋವಿಂದಗೌಡ ಎ.ಬಿ.ವಾಸಪ್ಪ, ಎಂ.ಟಿ.ಮಾತಸವರ್, ಕೆ.ಸುಂದರನಾಯ್ಕ್, ಬಿ.ಜಿ.ಚಂದ್ರಶೇಖರ್ ಮುಂತಾದವರು ಮಾತನಾಡಿದರು

ಇದೇ ಸಂದರ್ಭದಲ್ಲಿ ಕೊಪ್ಪದಿಂದ ವರ್ಗವಾಗಿರುವ ತಹಸೀಲ್ದಾರ್ ಹೆಚ್.ಎಂ.ನಾಗಪ್ಪ ಅವರಿಗೆ ತಮ್ಮಡವಳ್ಳಿ ಗ್ರಾಮಸ್ಥರು ಕಿರುಕಾಣಿಕೆ ಅರ್ಪಿಸಿದರು.

ಕ್ಷೇತ್ರಾಭಿವೃದ್ಧಿ ಅಧಿಕಾರಿ ಬಾಲಣ್ಣ ಗೌಡ ಸ್ವಾಗತಿಸಿ ತಹಸೀಲ್ದಾರ್ ಕರೀಗೌಡ ವಂದಿಸಿದರು.

ಶೃಂಗೇರಿ ತಾ|| ರೈತ ಸಂಘದ ನೇತೃತ್ವದಲ್ಲಿ

ರೈತರ ಬೃಹತ್ ಪ್ರದರ್ಶನ

ಶೃಂಗೇರಿ: ತಾಲ್ಲೂಕಿನ ಎಲ್ಲ ಅನಧಿಕೃತ ಸರಾಯಿ ಅಂಗಡಿಗಳನ್ನು ಮುಚ್ಚುವುದು, ನೀರಿನ ತೆರಿಗೆ ರದ್ದು, ೫ ಎಕ್ರೆ ವಿಂದ ಬಗರ್ ಹುಕುಂ ಸಾಗುವಳಿ ಖಾಯಂ, ಮಂಜೂರಾತಿಯಾಗದ ಮನೆದಳ ಮಂಜೂರು, ಪಡಿತರ ಪದಾರ್ಥಗಳ ಹೆಚ್ಚಳ, ಅಕ್ಕಿ ಗಿರಣಿಗಳಲ್ಲಿ ಸರಿಯಾದ ಇಳುವರಿಗೆ ಕ್ರಮ, ಕಾಲೇಜು ಶಿಕ್ಷಣದವರೆಗೆ ಶಿಕ್ಷಣ ಶುಲ್ಕ ರದ್ದು—ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ರೈತ ಸಂಘ ಸೆ. ೨೯ ರಂದು ಇಲ್ಲಿ ಏರ್ಪಡಿಸಿದ್ದ ಬೃಹತ್ ಮೆರವಣಿಗೆಯಲ್ಲಿ ೨ ಸಾವಿರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ತಾ|| ರೈತ ಸಂಘದ ಅಧ್ಯಕ್ಷ ಶ್ರೀಕಂಠ ಗೌಡ, ಕೊಪ್ಪ ತಾ|| ರೈತ ಸಂಘದ ಅಧ್ಯಕ್ಷ ಮಳಿಗೆ ಚಂದ್ರಶೇಖರ್ ಇವರ ನೇತೃತ್ವದಲ್ಲಿ ಸಲ್ಲಿಸಿದ ಬೇಡಿಕೆಗಳಿಗೆ ತ್ರಿಪಕ್ಷೀಯ ಸಂಧಾನ ನಡೆಸಿ ಮೇಲಧಿಕಾರಿಗಳ ಸೂಕ್ತ ಆದೇಶ ಪಡೆಯುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ತಹಸೀಲ್ದಾರ್ ಭಾಸ್ಕರಾಚಾರ್ಯ ಭರವಸೆ ಕೊಟ್ಟರು.

ಕಾಲೇಜು ವಿದ್ಯಾರ್ಥಿಗಳು ಸಹ ತರಗತಿಗಳನ್ನು ಬಹಿಷ್ಕರಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕುಟುಂಬಕ್ಕೆ ೨,೫೦೦ ರೂ. ಪರಿಹಾರ

ಕೊಪ್ಪ: ಕಳೆದ ಎಪ್ರಿಲ್ ೧೯ ರಂದು ಸಂಭವಿಸಿದ ಬೆಂಕಿ ಅನಾಹುತದಲ್ಲಿ ತೀವ್ರ ನಷ್ಟಕ್ಕೀಡಾಗಿದ್ದ ಮೇಲ್ಪಾಲು ಬಳಿಯ ಆಳಿಬಿಳಲು ವೆಂಕಟರಾವ್ ಕುಟುಂಬಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ೨,೫೦೦ ರೂ. ಗಳ ಪರಿಹಾರ ಮಂಜೂರಾಗಿದೆಯೆಂದು ಶಾಸಕ ಗೋವಿಂದಗೌಡರು ತಿಳಿಸಿದ್ದಾರೆ.

೧೫೦ ವರ್ಷಗಳಿಗೂ ಹಿಂದಿನದಾದ, ಭಾರಿ ಗಟ್ಟಿ ಮುಟ್ಟಾದ ಮನೆ ಮತ್ತು ಮನೆಯಲ್ಲಿದ್ದ ಎಲ್ಲಾ ತರದ ಆಸ್ತಿ-ಪಾಸ್ತಿಗಳು ಸುಟ್ಟುಹೋಗಿ, ಸುಮಾರು ೬ ಲಕ್ಷ ರೂ. ಗೂ ಅಧಿಕ ಮೊತ್ತದ ನಷ್ಟ ಸಂಭವಿಸಿತ್ತು. ಸರ್ಕಾರಿ ಅಧಿಕಾರಿಗಳ ಅಂದಾಜಿನ ಪ್ರಕಾರವೇ ೨ ಲಕ್ಷ ೮೯ ಸಾವಿರ ರೂ. ನಷ್ಟವೆಂದು ಅಂದಾಜು ಮಾಡಲಾಗಿತ್ತು.

('ಮುಂಜಾವು': ೨೪-೪-೮೩. ನೋಡಿ.)

ವಯಸ್ಕರ ಶಿಕ್ಷಣ ಕೇಂದ್ರಗಳ ಶಿಕ್ಷಕರ ತರಬೇತಿ ಶಿಬಿರ

ಕೊಪ್ಪ: ತಾಲ್ಲೂಕು ಮಟ್ಟದ ವಯಸ್ಕರ ಶಿಕ್ಷಣ ಕೇಂದ್ರಗಳ ಶಿಕ್ಷಕರ ತರಬೇತಿ ಶಿಬಿರ ಸೆ. ೨೪ರಿಂದ ನಡೆಯಿತು. ಇಂದು ಶಿಬಿರದ ಉದ್ಘಾಟನೆಯನ್ನು ಕಿರಿಯ ಕಾಲೇಜು ಪ್ರಾಂಶುಪಾಲ ಜೆ. ವಿ. [illegible] ಅಧ್ಯಕ್ಷತೆಯಲ್ಲಿ ಹೆಚ್. ಎಂ. [illegible] ನೆರವೇರಿಸಿದರು. ಎ. ಹಲಗಪ್ಪ ಸ್ವಾಗತಿಸಿ, ಡಿ. ಮಹದೇವ ಸ್ವಾಮಿ ವಂದಿಸಿದರು.

ಶಿಬಿರದ ಮುಕ್ತಾಯ ಸಮಾರಂಭ ಕೇಪೇಟೆ ಶಾಲೆಯ ಮುಖ್ಯೋಪಾಧ್ಯಾಯ ಆರ್. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ವಿ. ಎಸ್. [illegible] ಶೆಟ್ಟಿ, ಎನ್.ಕೆ.ಗಣೇಶ ಮುಖ್ಯ ಅತಿಥಿಗಳಾಗಿದ್ದರು. ಶಿಬಿರಾರ್ಥಿಗಳು ತಮ್ಮ ಅನುಭವ ವಿವರಿಸಿದರು. ಮಹದೇವಸ್ವಾಮಿ ಸ್ವಾಗತಿಸಿ, ರಾಮಕೃಷ್ಣಪ್ಪ ವಂದಿಸಿದರು.

(ವರದಿ: ಬಿಲಗದ್ದೆ ಕೃಷ್ಣಮೂರ್ತಿ.

ಬೊಂಬಾಯಿಗೆ ಹೆಣ್ಣು ರವಾನೆ ಜಾಲ:

ಒಬ್ಬನ ಬಂಧನ

ಶೃಂಗೇರಿ: ಸುತ್ತ ಮುತ್ತಲ ಹಳ್ಳಿಗಳ [illegible] ದ ಕೆಲಸ ಕೊಡಿಸುವ ಅಥವಾ [illegible] ದ ಜೀವನದ ಆಮಿಷ ತೋರಿಸಿ ಹೆಣ್ಣುಗಳನ್ನು ಬೊಂಬಾಯಿಯ ವೇಶ್ಯಾ ವಾಟಿಗಳಿಗೆ ಕಳಿಸುವುದರಲ್ಲಿ [illegible] ಲಾದ ಮೆಣಸೆಯ ವಾಸು ಎಂಬಾತನನ್ನು ಇಲ್ಲಿನ ಠಾಣಾಧಿಕಾರಿ [illegible] ಬಂಧಿಸಿರುವುದಾಗಿ ವರದಿಯಾಗಿದೆ. ಆತನ ಹೆಸರನ್ನು ನ್ಯಾಯಾಂಗ ಸುಪರ್ದಿಗೆ [illegible] ಸಲಾಗಿದೆ.

ಕಂಟ್ರಾಕ್ಟರ್ ಮತ್ತು ಗ್ರಾಮಸ್ಥರ ನಡುವಿನ ವೈಷಮ್ಯ ಕಾರಣ?

ದುರಸ್ತಿಯಾದರೂ ನೀರಿಲ್ಲದ ಕೆರೆ!

ಮೇಲುಸಿಕ್ರಿ: ಎರಡು ವರ್ಷಗಳ ಹಿಂದೆ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ರಿಪೇರಿ ಮಾಡಲಾದ ಇಲ್ಲಿನ ಕೆರೆಕೊಡಿಗೆ ಎಂಬ ಹಳ್ಳಿಯಲ್ಲಿನ ಕೆರೆಯೊಂದು ನೀರಿಲ್ಲದೆ ನರಳುತ್ತಿದೆ.

ಕಂಟ್ರಾಕ್ಟರರ ಅಸಡ್ಡೆಯೇ ಈ ಕೆರೆ ಹೀಗಾಗಲು ಕಾರಣ ಎಂದು ಊರಿನ ಅನೇಕರು ಹೇಳುತ್ತಾರೆ. ಸಿಮೆಂಟು ಇತ್ಯಾದಿ ಸರಿಯಾಗಿ ಉಪಯೋಗಿಸದೇ ಹಣವನ್ನೂ, ಸಿಮೆಂಟನ್ನೂ ಕಂಟ್ರಾಕ್ಟರ್ ಸಿಕ್ಕಾಪಟ್ಟೆ ನುಂಗಿದ್ದಾರೆಂಬುದು ಕೆಲ ಹಳ್ಳಿಗರ ದೂರು.

ಈ ಬಗ್ಗೆ ಕಂಟ್ರಾಕ್ಟರರನ್ನು ಕೇಳಿದಾಗ "ರಿಪೇರಿ ಮಾಡುವ ಸಂದರ್ಭದಲ್ಲಿ ಊರಿನ ಕೆಲವರು ತುಂಬಾ ತೊಂದರೆ ಕೊಟ್ಟರು. ನಾವು ಕಟ್ಟಿದೊಡನೆ ಅದನ್ನು ಒಡೆದು ಹಾಕಿದರು. ಕಷ್ಟಪಟ್ಟು ಕೊನೆಗೂ ರಿಪೇರಿ ಮಾಡಿಸಿದೆ. ಕೆಲ ದಿನಗಳು ಸರಿಯಾಗಿ ಕೆರೆಯಲ್ಲಿ ನೀರು ನಿಂತಿದ್ದು, ಮತ್ತೆ ಒಡೆದು ಹಾಕಲಾಗಿದೆ. ಒಂದು ಸುದ್ದಿಯ ಪ್ರಕಾರ ಕಬ್ಬಿಣದ ಸರಳು ಹಾಕಿ ಕೆರೆ ಒಡೆಯಲ್ಪಟ್ಟಿದೆ. ಊರವರೇ ಹೀಗೆ ಮಾಡಿದರೆ ಇದಕ್ಕೇನೂ ಮಾಡಲಿಕ್ಕಾಗುವುದಿಲ್ಲ. ನಮ್ಮ ಪ್ರಯತ್ನ ನಾವು ಮಾಡಿದ್ದೇವೆ" ಎಂದು ಹೇಳುತ್ತಾರೆ.

ಈ ಬಗ್ಗೆ ಊರಿನ ಕೆಲವರು "ಕಂಟ್ರಾಕ್ಟರರು ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಹೀಗೆಲ್ಲ ಹೇಳುತ್ತಾರೆ. ನಮ್ಮ ಕೆರೆಯನ್ನು ನಾವೇ ಒಡೆದುಕೊಂಡು ನಮಗೇ ನಾವು ದ್ರೋಹ ಮಾಡಿಕೊಳ್ಳುತ್ತೀವೆಯೇ" ? ಎಂದು ಪ್ರಶ್ನಿಸುತ್ತಾರೆ.

ಈ ಮಧ್ಯೆ ಈ ಕೆರೆ ರಿಪೇರಿಗೆ ಮಂಜೂರಾಗಿರುವ ೨೩೪೯ ರೂ. ನಲ್ಲಿ ಪೂರ್ತಿ ಹಣ ಕಂಟ್ರಾಕ್ಟರ್‌ಗೆ ಇನ್ನೂ ಸಿಕ್ಕಿಲ್ಲ ಎಂದೂ ಅಂತಿಮ ಬಿಲ್ ಸಹ ಆಗಿಲ್ಲ ಎಂದೂ ಗೊತ್ತಾಗಿದೆ. ಇದರ ಕಂಟ್ರಾಕ್ಟನ್ನು ಅಸಗೋಡು ಗ್ರಾಮ ಪಂಚಾಯ್ತಿ ಅಧ್ಯಕ್ಷರು ವಹಿಸಿದ್ದರು. (ವರದಿ: 'ಕಾವಿ')

ಸಹಕಾರ ಸಂಘಕ್ಕೆ ಆಯ್ಕೆ

ನ.ರಾ.ಪುರ: ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ಲಕ್ಷ್ಮಣ ಶೆಟ್ಟಿ ಅಧ್ಯಕ್ಷರಾಗಿ ಹಾಗೂ ಈ ಕೆಳಕಂಡವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ: ಕೆ.ಆರ್.ಕೃಷ್ಣಮೂರ್ತಿ, ಅಬ್ದುಲ್‌ರಶೀದ್, ವಿ.ಆರ್. ಗೋವಿಂದಸ್ವಾಮಿ, ವೆಂಕಟರಮಣಯ್ಯ ಗೌಡ, ದೇವಣ್ಣ, ಕೆ.ಶ್ರೀಕಂಠೇ ಗೌಡ ಮತ್ತು ಕೆ. ಪುಟ್ಟಯ್ಯ.

ಕಾಡು ಹಂದಿಗಳ ಹಾವಳಿ ನಿವಾರಿಸಲು

ಅರಣ್ಯಾಧಿಕಾರಿಗೆ ರೈತರ ಮೊರೆ

ಕೊಪ್ಪ: ಭತ್ತ, ಅಡಿಕೆ, ಏಲಕ್ಕಿ, ಬಾಳೆ, ತರಕಾರಿ, ಇತ್ಯಾದಿ ಪ್ರತಿಯೊಂದು ಬೆಳೆಗೂ ಕಾಡು ಹಂದಿಗಳು ತೀವ್ರ ಹಾನಿ ಮಾಡುತ್ತಿದ್ದು, ವನ್ಯ ಜೀವಿ ಸಂರಕ್ಷಣಾ ಕಾಯಿದೆಯನ್ವಯ ಅವನ್ನು ಕೊಲ್ಲಲೂ ಬಾರದಾದ್ದರಿಂದ, ಅವುಗಳ ಉಪಟಳ ತಾಳಲಾರದ ಈ ಸುತ್ತ ಮುತ್ತಿನ ಹಳ್ಳಿಗಳ ಸುಮಾರು ೨೫ ಜನ ರೈತರು ನಿಯೋಗದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ. ಸುಂದರ ನಾಯ್ಕರನ್ನು ಕಂಡು ರಕ್ಷಣೆ ಕೇಳಿದರು.

ರೈತರ ಮನವಿಗಳನ್ನು ಮೇಲಧಿಕಾರಿಗಳಿಗೆ ತಿಳಿಸುವುದಾಗಿಯೂ [illegible] ಓಡಿಸಲು ೫ ಜನ [illegible] ಗ್ರಾಮಸ್ಥರಿಗೆ [illegible] ಭರವಸೆ [illegible]

[illegible] ದ [illegible] ಇವನ್ನು ಓಡಿಸುವ [illegible] ಕೃಷಿ ರೈತರನ್ನು ಕಾಡಿದೆ. ಕಾಡು [illegible] ಗಳ ಉಪಟಳ ತೀವ್ರ [illegible] ಕಾವಲು ಹುಡುಕಿ [illegible] ಗಳೂ ಜನರೂ [illegible]

ಗಾಂಧೀಜಿಯ ಬಗ್ಗೆ ಒಬ್ಬ ದಲಿತ ಚಿಂತಕನ ಅನಿಸಿಕೆಗಳು

ಕನ್ನಡ ಸಾಹಿತ್ಯದಲ್ಲಿ ನವ್ಯ, ನವೋದಯ, ಬಂಡಾಯ, ಇತ್ಯಾದಿಗಳಂತೆ ದಲಿತ ಸಾಹಿತ್ಯ ಕೂಡ ಇಂದು ಒಂದು ಪಂಥವೇ ಆಗಿಬಿಟ್ಟಿದೆ. ಅದರ ಅಗ್ರಗಣ್ಯರಲೊಬ್ಬರು ದೇವನೂರು ಮಹಾದೇವ.

'ಗಾಂಧಿ' ಚಿತ್ರದಲ್ಲಿ ಅವರ ಸಮಕಾಲೀನರೇ ಆದ ಡಾ|| ಅಂಬೇಡ್ಕರರನ್ನು ತೋರಿಸಿಲ್ಲ ಎನ್ನುವುದಕ್ಕಾಗಿ ಈ ಚಿತ್ರವನ್ನು ಬಹಿಷ್ಕರಿಸಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ದಲಿತರಿಗೆಲ್ಲ ಕರೆ ಕೊಟ್ಟಿದೆ. ಆದರೆ ದೇವನೂರು 'ಗಾಂಧಿ'ಚಿತ್ರ ನೋಡದಿರಲು ಆಗದೆ ನೋಡಿ, ತಮ್ಮ ಅನಿಸಿಕೆಗಳನ್ನು ೨೫-೯-೮೩ರ ಲಂಕೇಶ್ ಪತ್ರಿಕೆಯಲ್ಲಿ ಬರೆದಿದ್ದಾರೆ. ಆದರಿಂದ, ಗಾಂಧೀಜಿಯ ಬಗೆಗಿನ ಅವರ ಅನಿಸಿಕೆಗಳನ್ನು ಆಯ್ದು ಇಲ್ಲಿ ಸಂಗ್ರಹಿಸಲಾಗಿದೆ. ಲಂಕೇಶ್ ಪತ್ರಿಕೆಗೆ ಕೃತಜ್ಞತೆಗಳು. —ಸಂಪಾದಕ.

ಚಲಿಸುವ ಚೇತನ

[ಗಾ]ಂಧಿಯದು ಭೂಮಿಯಂತೆ ಒಂದು ... ನಿಲ್ಲದ ಚಲಿಸುವ ಚೇತನವು. ಈ ...ನವ ನಿರ್ದೇಶಕ ಈ ಚಿತ್ರದಲ್ಲಿ ಅದ್ಭುತ ... ಹಿಡಿದಿದ್ದಾನೆ. ಮೋಹನ ದಾಸನು ...ಲು ಕೆಂಪು ಮನುಷ್ಯನನ್ನು ಅನುಕರಿ... ಹೋಗಿ ಆ ಪ್ರಯಾಣದಲ್ಲಿ ಕ್ರೂರ ... ತಳ್ಳಿಸಿಕೊಂಡು ಅವಮಾನಿತನಾಗಿ ...ಂಧಿ'ಯಾಗಲು ಆರಂಭಿಸುತ್ತಾನೆ. ...ತೀಯ ಅಸ್ಪೃಶ್ಯತನದ ಬೀಜ ಅವನ...ಗೆ ಆಗ ಬಿತ್ತಿದಂತಾಗಿರಬೇಕು. ಕೇವಲ ಒಂದು ಅವಮಾನಕ್ಕೆ ಆ ಮೋಹನ್ ...ಸನು 'ಮಹಾತ್ಮಾಗಾಂಧಿ'ಯಾಗಿ ಪರಿ...ಣಿಸಿಗೊಳ್ಳುವುದಾದರೆ ದೇಹವಿಡೀ, ಜೀ...ವಿಡೀ ಅವಮಾನದಿಂದಲೇ ಮಾಡಲ್ಪಟ್ಟ ...ಸ್ಪೃಶ್ಯ ಬೆಳೆದರೆ ಅದೆಷ್ಟು ಎತ್ತರಕ್ಕೆ ಬೆಳೆ...ಯಬಹುದೆಂಬುದು ನನ್ನ ಊಹೆ–ಅಳತೆ...ಗೆ ನಿಲುಕದಷ್ಟು ಎತ್ತರದ್ದಾಗಿದೆ.

...ಆಫ್ರಿಕಾದಲ್ಲಿ ಕರಿಯನಾದ ಮೋಹನ್...ಗೆ ಆ ಕರಿಯತನವೇ ದಿಕ್ಕು ತೋರಿ...ದೆ. ಸಹನೆ, ದೃಢತೆ, ಅಹಿಂಸೆ ಇವುಗ...ಳನ್ನೆ ಎದುರಾಳಿಯನ್ನೂ ಮಾನವನಾಗಿ ... ಅಪೂರ್ವತೆ, ಇದರೊಟ್ಟಿಗೇ ಹೊಸ ... ಸಹಜೀವನ ಕಟ್ಟುವ ಒಳಗಣ್ಣು ...ಧಿಗೆ ಅಲ್ಲುಂಟಾಗುತ್ತದೆ. ಆ 'ಕಾಗದ ...ವ ಸಂದರ್ಭ'ದಲ್ಲಿ ಮೋಹನ್‌ದಾಸ್ ...ಧಿಗೆ ಬಿಳಿ ಪೋಲೀಸ್ ಹೊಡೆದೂ ...ಡೆದೂ ಸುಸ್ತಾಗಿ ಗಾಂಧಿಯ ನಿರ್ಲಿಪ್ತ...ತೆಕಕ್ಕೆ ಆ ಕ್ರೂರ ಪೋಲೀಸ್‌ನಲ್ಲೂ ...ನವ ಇಣುಕುವುದರ ಎಳೆಯೇ ...ಯನ್ನು ಮುಂದೆ ನಡೆಸಿಕೊಂಡು ...ಗುತ್ತದೆ.

...ಮೇಲೆ ಮೋಹನ್‌ದಾಸ್ ಗಾಂಧಿ ...ಲನೆಯ ದರ್ಜೆಯ ಗುಜರಾತಿಯಾಗಿ ...ತಕ್ಕೆ ಬಂದು, ಆತನ ಪ್ರಯಾಣದಲ್ಲಿ ...ನಿಂತಾಗ, ಉಟ್ಟ ಸೀರೆಯನ್ನೇ ಒಗೆ...ಯಳ್ಳುತ್ತಿದ್ದ ಹೆಂಗಸಿಗೆ ತನ್ನ ಪೇಟ ... ಕೊಟ್ಟು ಎರಡನೆಯ ದರ್ಜೆಯ ಭಾರ...ತನಾಗುತ್ತಾನೆ. ಅಲ್ಲಿಂದ ಚಂಪಾರಣ್ಯ...ತನಿಗೆ ಲಂಗೋಟಿ ಮಾತ್ರದಷ್ಟು ...ಕೊಟ್ಟು ಮೂರನೆ ದರ್ಜೆಗೆ ಇಳಿಸಿ ...ತ್ಮನನ್ನಾಗಿಸುತ್ತದೆ. ಗರೀಬರ ಸದ... ಮನಸ್ಸು, ಚಿಂತನೆ ಪಡೆದು ...ಹನ್‌ದಾಸ್ ಕರಮಚಂದ ಗಾಂಧಿ ...ತ್ಮಗಾಂಧಿಯಾಗುತ್ತಾನೆ.

ಪವಾಡ

...ಮಾನವನ ಒಂದು ಜೀವಿತದಲ್ಲಿ ಇಷ್ಟೆಲ್ಲ ...ವುದೂ ಒಂದು ಪವಾಡವೇ. ತನ್ನ ... ದೇಹದಲ್ಲಿ ಇಷ್ಟೆಲ್ಲ ರೂಪಾಂತರವಾದ ..., ತನ್ನ ಜೀವಿತವ ಪ್ರಯೋಗಕ್ಕಿಟ್ಟು ... ಗಾಂಧಿ–ಯಾಕೆ ಅಸ್ಪೃಶ್ಯನ ..., ಮನಸ್ಸು ಪಡೆಯಲಿಲ್ಲ ಎಂಬುದು ...ಬಿನ್ನನನ್ನಾಗಿಸಿದೆ. ಗಾಂಧಿಯು ...ಶ್ಯರ ಬಗ್ಗೆ ಅತ್ಯಂತ ಅನುಕಂಪ ತೋ...ರೆಯೇ ಹೊರತು ಗಾಂಧಿಯು ...ಶ್ಯ ಸ್ಥಿತಿಯೇ ಆಗಿ ಅದರ ದನಿಯಾಗು... ಅಸ್ಪೃಶ್ಯ ಆಗಲು ಮುಂದಿನ ಜನ್ಮ ...ಸುತ್ತಾರೆ. ಅದಕ್ಕಾಗಿ ಗಾಂಧಿ ಬಗ್ಗೆ ಅಂಬೇಡ್ಕರರಿಗೆ ಇರುವ ಕಠೋರತೆಯನ್ನೂ ಅರ್ಥ ಮಾಡಿಕೊಳ್ಳಬೇಕೆನ್ನಿಸುತ್ತದೆ.

"ಭಾರತ ಎರಡಾಗುವುದಾದರೆ ನನ್ನ ಹೆಣದ ಮೇಲಾಗಬೇಕೆಂದು ನುಡಿದ ಗಾಂಧಿ ತಮ್ಮ ನುಡಿಯನ್ನು ಉಳಿಸಿಕೊಂಡಿದ್ದರೆ ಕ್ರಿಸ್ತನ ಮಟ್ಟಕ್ಕೆ ಮುಟ್ಟುತ್ತಿದ್ದರು" ಎನ್ನುವ ಡಾ|| ಲೋಹಿಯಾರ ಮಾತಿನ ಸತ್ಯತೆ–ಅಂದರೆ ಗಾಂಧಿಯ ಈ ಒಂದು ಕೊರತೆ ಮತ್ತು ಗಾಂಧಿ ಈ ನಾಡ ತಳದ ಮಾನವನ–ಅಸ್ಪೃಶ್ಯನ–ದೇಹ, ಮನಸ್ಸು, ಚಿಂತನೆ ಪಡೆಯದೆ ಅದಕ್ಕಾಗಿ ಮುಂದಿನ ಜನ್ಮ ಆಶಿಸುವುದು ಈ ಎರಡೂ ಕೊರತೆಯಿಂದಾಗಿ ನಮ್ಮ ಯುಗದ ಎತ್ತರದ ಪುರುಷ ಗಾಂಧಿಯ ಎತ್ತರ ಆಕಾಶ ಮುಟ್ಟಲು ಎರಡು ಗೇಣು ಕಮ್ಮಿಯಾಗುತ್ತದೆ.

ಅಹಿಂಸೆ ತಂತ್ರವಲ್ಲ, ಬದುಕು

ನಾನು ಅಹಿಂಸೆ ಪರವಾಗಿದ್ದು ಉದ್ವಿಗ್ನತೆಯ ದಲಿತ ಸ್ನೇಹಿತರೊಡನೆ 'ಅಂಬೇಡ್ಕರ್ ಕೂಡ ಅಹಿಂಸೆಯನ್ನು ಹಿಡಿದಿದ್ದರು. ಅದಕ್ಕೆ ಅವರು ಬೌದ್ಧರಾದುದು' ಎಂದು ಒಪ್ಪಿಸುತ್ತಿದ್ದೆ. ಆದಾಗ್ಯೂ ಅನೇಕರು ಒಪ್ಪುತ್ತಿರಲಿಲ್ಲ. ಆಗ ವಾಸ್ತವತೆಯ ಉದಾಹರಣೆ ಕೊಟ್ಟು, ಅಂದರೆ, "ನೋಡಿ, ನಾವು ಅಸ್ಪೃಶ್ಯರು ಕಮ್ಮಿ ಸಂಖ್ಯೆಯಲ್ಲಿದ್ದೇವೆ. ಪೋಲೀಸು–ಮಿಲ್ಟ್ರಿ ಎದುರಿಸುವುದು ಆಗದ ಮಾತು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ಅಕ್ಕ ಪಕ್ಕದ ವಾಸಿಗಳಾದ ಸವರ್ಣೀಯರು ನಾವು ಇರುವುದನ್ನೇ ಸಹಿಸರು. ಹೀಗಿರುವಾಗ ನಾವು ಹಿಂಸೆ ಹಿಡಿದರೆ ನಮಗೆ ಉಳಿಗಾಲವಿಲ್ಲ" ಎಂದು ತಂತ್ರವಾಗಿಯಾದರೂ ಅಹಿಂಸೆ ಒಪ್ಪಿಸಲು ಹೆಣಗುತ್ತಿದ್ದೆ. ಗಾಂಧಿ ಚಿತ್ರ (೩ನೇ ಪುಟಕ್ಕೆ)

ಗಣೇಶೋತ್ಸವ: ಸ್ವಲ್ಪ ಚಿಂತನೆ ಅಗತ್ಯ

—'ಹೆಚಿಜ'—

ಗೌರಿ–ಗಣೇಶನ ಹಬ್ಬ ಇಂದು ಸಡಗರದ ಸಾಂಸ್ಕೃತಿಕ ಕಾರ್ಯಕ್ರಮವಾಗಿ, ಎಲ್ಲಾ ವರ್ಗದ ಜನ ಅದರಲ್ಲಿ ಭಾಗವಹಿಸುತ್ತಿರುವುದು ಸಂತೋಷದ ವಿಷಯ. ಊರಿನ ಶಾಲೆ, ಆಸ್ಪತ್ರೆ ಮುಂತಾದವು ಮುಚ್ಚಿ ಹೋದರೂ ಅಷ್ಟು ಯೋಚನೆ ಮಾಡದ ಜನ ಇದಕ್ಕಾಗಿ ಸಾವಿರಾರು ರೂ. ಖರ್ಚು ಮಾಡುವುದಲ್ಲದೆ ಅದಷ್ಟೂ ಶ್ರಮಿಸಲು ತಯಾರಿದ್ದಾರೆ.

ಈ ಕಾರ್ಯಕ್ರಮಗಳು ಕೆಲವು ಕಡೆಗಳಲ್ಲಿ ನಡೆಯುವ ಕಾರ್ಯ ವೈಖರಿ ಚರ್ಚಿಸಬೇಕಾದ ವಿಷಯವಾಗಿ ಕಾಣುತ್ತಿದೆ.

ವೈಖರಿ

ಒಟ್ಟು ಖರ್ಚಿನ ಕಾಲು ಭಾಗ ಧ್ವನಿವರ್ಧಕಕ್ಕೆ ಖರ್ಚಾಗಿ ದಿನಕ್ಕೆ ೧೨ ರಿಂದ ೧೮ ಗಂಟೆ ಇದರ ಹಾವಳಿ; ಈಚೆಗೆ ವಾಹನ ಸಂಚಾರದ ಗೀಳು ಹೆಚ್ಚಿರುವ ಗಣೇಶನಿಗೆ ಕೆಲವೆಡೆ ಡ್ರೈವರ್ ಮಾತ್ರ ಸ್ವಲ್ಪ ಮೇಲು ಜಾತಿಯವನೇ ಬೇಕಾಗುವುದು; ಸಮಿತಿಗಳು ಲೆಕ್ಕ–ಪತ್ರಗಳನ್ನು ಸಕಾಲದಲ್ಲಿ ಮಂಡಿಸದೆ ಇರುವುದು ಮತ್ತು ಖೋತ ಬಜೆಟ್‌ಗಳು; ಒಂದೇ ಊರಿನಲ್ಲಿ ಬೀದಿಗೊಂದು ಗಣಪತಿ ಇಡುವುದು; ಸಮಿತಿಯ ಸದಸ್ಯರಲ್ಲದವರೂ ಬೇರೆ ಬೇರೆ ಕಡೆ ಖೋಟಾ ರಸೀದಿಯೊಂದಿಗೆ ಹಣ ಸಂಗ್ರಹಿಸುವುದು; ವಾಹನಗಳನ್ನು ನಿಲ್ಲಿಸಿ ಹಿಂಸೆಯ ರೀತಿಯಲ್ಲಿ 'ಮಾಮೂಲಿ' ವಸೂಲಿ; ಕೆಲವೆಡೆ ಈ ಹಬ್ಬ ವರ್ಷಕ್ಕೊಮ್ಮೆ ನಡೆಯುವ ಹಾದರದ ಜಾತ್ರೆಯಾಗಿರುವುದು; ಬೆಳ್ಳಿ ಹಬ್ಬದ ಗೀಳಿನವರು ಲಕ್ಷಾಂತರ ರೂ. ಗಳನ್ನು ಇದಕ್ಕೆ ಖರ್ಚು ಮಾಡುವುದು—ಇತ್ಯಾದಿಗಳು ಅನೇಕ ಕಡೆ ನಡೆಯುತ್ತಿವೆ.

ನನ್ನ ಕೆಲವು ಸಲಹೆಗಳು

ಧ್ವನಿವರ್ಧಕಾಸುರನ ಹಾವಳಿಯನ್ನು ದಿನಕ್ಕೆ ೪–೫ ಗಂಟೆಗಳಿಗೆ ಇಳಿಸುವುದು; ಉತ್ಸವದ ಖರ್ಚನ್ನೂ, ಸದಸ್ಯರ 'ಇತರೆ' ಖರ್ಚುಗಳನ್ನೂ ಆದಷ್ಟು ತಗ್ಗಿಸಿಕೊಂಡು, ಹೆಚ್ಚು ಹಿಂಸಿಸದೆ ಜನರಿಂದ ಚಂದಾ ಸಂಗ್ರಹಿಸುವುದು ಹಾಗೂ 'ಮಾಮೂಲಿ'ನ ರಸ್ತೆ ದರೋಡೆ ನಿಲ್ಲಿಸುವುದು; ಸಮಯಕ್ಕೆ ಸರಿಯಾಗಿ ಲೆಕ್ಕ–ಪತ್ರ ಮಂಡನೆ; ಸಂಗ್ರಹಿಸಿದ ಹಣದ ಅಥವಾ ಬಜೆಟ್ಟಿನ ಸ್ವಲ್ಪ ಭಾಗವನ್ನಾದರೂ ಸಾಮಾಜಿಕ ಕಾರ್ಯಗಳಿಗೆ (ಶಾಲೆ, ಆಸ್ಪತ್ರೆ ಇತ್ಯಾದಿ) ಬಳಸುವುದು ಹಾಗೂ ಜನರ ಭಾವನೆ ಸ್ವಲ್ಪ ಆ ಕಡೆಗೂ ಹರಿಯುವಂತೆ ಮಾಡುವುದು; ಜನರಲ್ಲಿ ಭಾವೋದ್ವೇಗವನ್ನು ಹಬ್ಬಿಸದೆ ದೇಶದ ಇಡೀ ಸಮಾಜ–ಎಲ್ಲ ಜನ ವರ್ಗಗಳನ್ನು ಒಟ್ಟುಗೂಡಿಸಲು ಶ್ರಮಿಸುವುದು—ಮುಂತಾದ ಕೆಲವು ವಿಷಯಗಳ ಬಗ್ಗೆ ವಿವಿಧ ಗಣೇಶೋತ್ಸವ ಸಮಿತಿಗಳು ಚಿಂತನೆ ನಡೆಸಲೆಂದು ಆಶಿಸುತ್ತೇನೆ.

ಚುಟುಕಗಳು

ಅಧ್ಯಕ್ಷತೆ

ಮಂಡಲದ ಪಂಚಾಯ್ತಿ ಆಗೋ ಬಂತು,
ಮಂಡಲಾಧೀಶ್ವರರ ಸರದಿ ಬಂತು.
ಪುಟಗೋಸಿ ಛೇರ್ಮನರು ಹಾಕಿದರು
ಕಣ್ಣೀರು,
ದೊಡ್ಡವರು ತಲುಪಿದರು ಬೆಂಗಳೂರು.

ಶ್ರೀಲಂಕೆ

'ಹೊತ್ತಿ ಉರಿಯುತ್ತಲಿಹುದಿಂದು
ಶ್ರೀಲಂಕೆ'
ಸುದ್ದಿ ಕೇಳಿದ ಅಜ್ಜ ಹೇಳಿದರು ಹೀಗೆ:
ಹನುಮನು ಚಿರಂಜೀವಿ ಎಂಬುದಕ್ಕೆ
ಈಗಲೂ ಸಾಕ್ಷಿಯನು ಹೇಳುತಿದೆ ಲಂಕೆ

ಮಂತ್ರಿ ಸಿದ್ಧಿ

ನಮ್ಮೂರ ದೆವ್ವಗಳು ಭಾರೀ ಪ್ರಸಿದ್ಧಿ,
ಮಂತ್ರ ಶಕ್ತಿಗೂ ಕೂಡ ಬಗ್ಗದಾ ಬುದ್ಧಿ.
'ಮಂತ್ರಿ ಬರುವನು ನಾಳೆ ಈ ಊರಿಗೆ'—
ಸುದ್ದಿ ಕೇಳಿಯೆ ಬುದ್ಧಿ ಹೇಳಿಬವು ಕಾಲಿಗೆ.

—ಹೆಚ್. ಎಲ್. ಮಹಾಬಲರಾವ್,
ಹುಲಿಗರಡಿ.

ಓದುಗರ ಪತ್ರಗಳು

೧೯೮೨ರ ವಿಲೇವಾರಿ ಪಟ್ಟಿಯಂತೆ

ದಲಿತರಿಗೆ ಜಮೀನು: ನ್ಯಾಯಕ್ಕೆ ಒತ್ತಾಯ

ಮಾನ್ಯರೆ,

ದರ್ಖಾಸ್ತು ಮೂಲಕ ಭೂಮಿ ಹಂಚಿಕೆಯಲ್ಲಿ ಹರಿಜನ–ಗಿರಿಜನರಿಗೆ ಈವರೆಗೆ ಆದ ತಾರತಮ್ಯವನ್ನು ಸರಿತೂಗಿಸಲು ಶೇ. ೬೦ ರಷ್ಟು ಭೂಮಿಯನ್ನು ಅವರಿಗೆ ಮಂಜೂರು ಮಾಡುವಂತೆ ಕಳೆದ ವರ್ಷ ಸರ್ಕಾರ ಆದೇಶ ಮಾಡಿದ್ದಕ್ಕೆ ಅನುಗುಣವಾಗಿ ಶೃಂಗೇರಿ ತಾ|| ತಹಸೀಲ್ದಾರರು ಪ್ರಕಟಿಸಿದ ೧೯೮೨ರ ವಿಲೇವಾರಿ ಪಟ್ಟಿಯಲ್ಲಿ ೪೦೦ ಎಕರೆಗೂ ಹೆಚ್ಚು ಭೂಮಿಯನ್ನು ಕಾದಿರಿಸಲಾಗಿತ್ತು. ಆದರೆ ಈ ವರ್ಷ ಪ್ರಕಟಿಸಿದ ವಿಲೇವಾರಿ ಪಟ್ಟಿ ಈ ಬಾಬಿನಲ್ಲಿ ದಲಿತರಿಗೆ ಅನ್ಯಾಯ ಮಾಡಿದೆ.

ತಲೆತಲಾಂತರಗಳಿಂದ ಶ್ರೀಮಂತರ ಜಮೀನಿನಲ್ಲಿ ಕೃಷಿ ಕಾರ್ಮಿಕರಾಗಿ ಕೆಲಸ ಮಾಡಿಕೊಂಡು ಬಂದ ದಲಿತರಿಗೆ, ವ್ಯಾಪಾರ ವ್ಯವಹಾರ–ಉದ್ಯೋಗ ರಂಗಗಳಲ್ಲೆಲ್ಲ ಜಾತೀಯತೆ ತಾಂಡವವಾಡುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಜಮೀನು ಹಂಚಿಕೆಯೊಂದೇ ಅವರ ಏಳಿಗೆಗೆ ನೆರವಾಗಬಲ್ಲ ಮಾರ್ಗ.

ಶೃಂಗೇರಿ ತಾಲ್ಲೂಕಿನಲ್ಲಿ ಹಂಚಿಕೆಗೆ ಜಮೀನೇ ಇಲ್ಲ ಎಂದೂ, ಗ್ರಾಮವಾರು ಕೃಷಿ ಜಮೀನಿನ ಎರಡರಷ್ಟು ಸೊಪ್ಪಿನ ಬೆಟ್ಟ ಕಾದಿರಿಸಬೇಕಾಗಿದೆಯೆಂದೂ ದಲಿತರಿಗೆ ತಿಳಿಸಲಾಗುತ್ತಿದೆ. ಆದರೆ, ಶ್ರೀಮಂತರು ಒತ್ತುವರಿ ಮಾಡಿಕೊಂಡಿರುವ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಖುಲ್ಲ ಮಾಡಿಸಲು ಯಾವ ರೀತಿಯ ಕ್ರಮವನ್ನೂ ಕೈಗೊಂಡಿಲ್ಲ. ಇದರಿಂದ ಸರ್ಕಾರ ನಿರೀಕ್ಷಿತ ಉದ್ದೇಶ ಸಾಧಿಸುವ ಬದಲು ಈಗಾಗಲೇ ಹೆಚ್ಚು ಜಮೀನು ಹೊಂದಿರುವ ಶ್ರೀಮಂತರು ಒತ್ತುವರಿ, ಕಾಫಿ ಇತ್ಯಾದಿ ಬಗರ್ ಹುಕುಂ ಸಾಗುವಳಿಗಳ ಮೂಲಕ ಮತ್ತಷ್ಟು ಭೂಮಿಯನ್ನು ಹೊಂದಲು ಹೇರಳ ಅವಕಾಶ ಒದಗಿದಂತಾಗಿದೆ. ಇದು ದಲಿತರ ನಿಜವಾದ ಏಳಿಗೆ ಸಹಿಸದ ಶ್ರೀಮಂತರ ವಶದಲ್ಲಿರುವ ಸರ್ಕಾರದ ಕಾರ್ಯ ವೈಖರಿಯನ್ನು ಎತ್ತಿ ತೋರಿಸುತ್ತದೆ.

ಆದ್ದರಿಂದ ಇನ್ನು ಜಮೀನು ಹಂಚಿಕೆ ಸಾಧ್ಯವಿಲ್ಲ ಎಂದಾದರೆ, ಸರ್ಕಾರದಿಂದ ಮಂಜೂರಾಗಿರುವುದನ್ನು ಹೊರತು ಒತ್ತುವರಿಯಾಗಿರುವ ಎಲ್ಲಾ ಸರ್ಕಾರಿ ಭೂಮಿಯನ್ನು ಜಮೀನ್ದಾರರ ಹಿಡಿತದಿಂದ ಬಿಡಿಸಿ ಸೊಪ್ಪಿನ ಬೆಟ್ಟವೆಂದು (ಬೇಕಾದರೆ) ಸರ್ಕಾರ ಘೋಷಿಸಲಿ. ಅಂತೂ ೧೯೮೨ರ ಪಟ್ಟಿ

(೪ ನೇ ಪುಟಕ್ಕೆ)

ವಿದ್ಯುಚ್ಛಕ್ತಿ ಟ್ರಾನ್ಸ್‌ಫಾರ್ಮರ್ ಬದಲಿಸಲು ಅಧಿಕಾರಿಗಳಿಗೆ ವಿದ್ಯುತ್ ಬಳಕೆದಾರರ ಪತ್ರ

ಬಿಲಗದ್ದೆ: ಇಲ್ಲಿ ಹಿಂದೆ ಇದ್ದ ವಿದ್ಯುಚ್ಛಕ್ತಿ ಟ್ರಾನ್ಸ್‌ಫಾರ್ಮರನ್ನು ಕೊಪ್ಪ ಎಸ್ಟೇಟ್ ಬಳಿಗೂ, ಅಲ್ಲಿದ್ದುದನ್ನು ಮೇಲ್ಪಾಲಿಗೂ, ಅಲ್ಲಿನದನ್ನು ಇಲ್ಲಿಗೂ ಹಾಕಿದ ನಂತರ ಇಲ್ಲಿನ ಬಳಕೆದಾರರಿಗೆ ವಿದ್ಯುತ್ ಸರಬರಾಜು ಏರುಪೇರಾಗಿದ್ದು ಒಂದೇ ಸಮನೆ ಬಲ್ಬ್‌ಗಳು ಸುಟ್ಟು ಹೋಗುತ್ತಿವೆಯೆಂದೂ, ಪ್ರತಿ ತಿಂಗಳೂ ವಿದ್ಯುತ್ ಬಳಸದಿದ್ದರೂ ಬಿಲ್ ಕಟ್ಟುತ್ತ [illegible] ಅನುಭವಿಸುತ್ತಿರುವುದಾಗಿಯೂ ಇಲ್ಲಿನ ವಿದ್ಯುತ್ ಬಳಕೆದಾರರು ಕೊಪ್ಪದ ವಿದ್ಯುಚ್ಛಕ್ತಿ ಸ|| ಇಂಜಿನಿಯರ್‌ಗೆ ದೂರಿದ್ದಾರೆ.

ಕೂಡಲೇ ಒಳ್ಳೆಯ ಟ್ರಾನ್ಸ್‌ಫಾರ್ಮರ್ ಹಾಕಿ ಕೊಡಬೇಕೆಂದೂ, ಅದು ಸಾಧ್ಯವಿಲ್ಲದಿದ್ದಲ್ಲಿ ಅಲ್ಲಿಯವರೆಗೂ ತಮ್ಮ ಮನೆಗಳ ವಿದ್ಯುತ್ ಸರಬರಾಜನ್ನು ನಿಲ್ಲಿಸಿ [illegible] ತಪ್ಪಿಸಬೇಕೆಂದೂ ಇಡೀ ಗ್ರಾಮದ ಎಲ್ಲಾ ಬಳಕೆದಾರರೂ ಒಕ್ಕೊರಲಿನಿಂದ ಕೋರಿ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.

'ಶಾಸಕರು ಬರದ ಸಮಾರಂಭ', 'ಕಟ್ಟಡಕ್ಕೆ ಬೀಗ' ವರದಿಗಳು:

ಗೋವಿಂದ ಗೌಡರ ಸ್ಪಷ್ಟೀಕರಣ

ಮಾನ್ಯರೆ,

ನಿಮ್ಮ ೧೮–೯–೮೩ ಮತ್ತು ೨೫–೯–೮೩ರ ಸಂಚಿಕೆಗಳಲ್ಲಿ ಬೆಳವಿನಕೊಡಿಗೆಯ ಸಮಾರಂಭಕ್ಕೆ ನಾನು ಗೈರುಹಾಜರಾದ ವಿಷಯ ಹಾಗೂ ಕಂಟ್ರಾಕ್ಟರರ ಪ್ರತಿಕ್ರಿಯೆ ಓದಿದೆ. ನನ್ನ ಗೈರುಹಾಜರಿಯ ಬಗ್ಗೆ ಈ ಕೆಳಗಿನ ಸ್ಪಷ್ಟೀಕರಣ ನೀಡಬಯಸುತ್ತೇನೆ.

ಮಹಿಳಾ ಸಮಾಜದ ಕಟ್ಟಡ ಉದ್ಘಾಟನೆ ವಿಷಯ ನನಗೆ ಯಾರೂ ತಿಳಿಸಿರಲಿಲ್ಲ. ಆಹ್ವಾನ ಪತ್ರಿಕೆಯೂ ತಲುಪಿರಲಿಲ್ಲ.

ಕಟ್ಟಡದ ಬಿಲ್ ವಗೈರೆ ಇತ್ಯರ್ಥವಾಗಿಲ್ಲವೆಂದು ಕಂಟ್ರಾಕ್ಟರ್ ತಿಳಿಸಿದ್ದರು. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೂ ಕಾರ್ಯಕ್ರಮ ಗೊತ್ತಿರಲಿಲ್ಲ. ತಾನು ಬೀಗ ಹಾಕುವುದಾಗಿ ಕಂಟ್ರಾಕ್ಟರ್ ಹೇಳಿದ್ದರು. ಇಂಥ ವಿವಾದಾಸ್ಪದವಾದ, ಅಧಿಕಾರಿಗಳ ಗಮನಕ್ಕೂ ತಾರದ, ನನಗೂ ಮುಂಚಿತವಾಗಿ ತಿಳಿಸದ ಕಾರ್ಯಕ್ರಮಕ್ಕೆ ನಾನು ಹೋಗಲು ತಯಾರಿಲ್ಲವೆಂದು ಬಿ.ಜಿ.ಚಿದಂಬರ್‌ಗೆ ತಿಳಿಸಿದ್ದೆ.

ಆದರೆ ಜನ ಆಹ್ವಾನ ಪತ್ರಿಕೆ ನೋಡಿ ಕಾದುದನ್ನೂ, ನಾವು ಗೈರು ಹಾಜರಾದೆವೆಂದು ಭಾವಿಸಿರುವುದನ್ನೂ, ತಿಳಿದು ವಿಷಾದವಾಯಿತು. ಆದರೆ ಜನ ಕಾಯುವಂತಾದುದರಲ್ಲಿ ನನ್ನ ತಪ್ಪಿಲ್ಲವೆಂದು ನಮ್ರವಾಗಿ ಮತದಾರರಲ್ಲಿ ವಿನಂತಿಸುತ್ತೇನೆ.

—ಹೆಚ್. ಜಿ. ಗೋವಿಂದ ಗೌಡ,
ವಿಧಾನ ಸಭಾ ಸದಸ್ಯ, ಶೃಂಗೇರಿ.

ರೈತ ಚಳುವಳಿಯ ಬಗ್ಗೆ ನಿಮ್ಮ ತಿಳುವಳಿಕೆ ಎಂಥದು?

ಓದುಗರೆ,

ಇಂದು ರಾಜ್ಯಾದ್ಯಂತ ಕರ್ನಾಟಕ ರಾಜ್ಯ ರೈತ ಸಂಘದ ಚಟುವಟಿಕೆ ಹರಡುತ್ತಿದೆ. ಹಿಂದೆ ಯಾವುದೇ ಜನಸಾಮಾನ್ಯರನ್ನು ಗೌರವದಿಂದ ಮಾತಾಡಿಸಿ, ಅವರ ಕೆಲಸಗಳನ್ನು ಸಕಾಲದಲ್ಲಿ ಮಾಡಿಕೊಟ್ಟು ಗೊತ್ತಿಲ್ಲದ ಅಧಿಕಾರಿಗಳು, ನೌಕರರು– ಅವರಲ್ಲಿ ಕೆಲವಾದರೂ– ಇಂದು ಸ್ವಲ್ಪವಾದರೂ ಜನರಿಗೆ,-ರೈತರಿಗೆ ಹೆದರುವ ಪರಿಸ್ಥಿತಿ ಉಂಟಾಗಿದೆಯೆಂಬುದು ನಿರ್ವಿವಾದ. ಹಾಗೂ ಇದಕ್ಕೆ, ಬಹಳ ಬಿರುಸಿನಿಂದ ನಡೆದು ಅವರಿಗೆಲ್ಲ ಸರಿಯಾಗಿಯೇ ಬಿಸಿ ಮುಟ್ಟಿಸಿದ ಮಲಪ್ರಭಾ ಮತ್ತು ಶಿವಮೊಗ್ಗದ ರೈತ ಚಳುವಳಿಗಳೂ ಬಹಳ ಮಟ್ಟಿಗೆ ಕಾರಣ ಎಂಬುದೂ ಸತ್ಯ

ಇಂಥ ಚಳುವಳಿ–ಸಂಘಟನೆಗಳ ಮೂಲಕವೇ ಬಗೆಹರಿಸಿಕೊಳ್ಳಬೇಕಾದ ಎಷ್ಟೋ ಸಮಸ್ಯೆಗಳು ನಮ್ಮ ಈ ಭಾಗದಲ್ಲೂ ಇದ್ದರೂ ಇಲ್ಲಿ ರೈತ ಸಂಘದ ಬಗ್ಗೆ ಕೆಲವು ತಿಳುವಳಿಕೆಯ ಕೊರತೆ ಅನುಮಾನ–ಅಪನಂಬಿಕೆಗಳು, ರೈತ ಚಳುವಳಿಯ ಬಗ್ಗೆ ತಪ್ಪು ಕಲ್ಪನೆಗಳು ಇರುವುದು ಕಾಣುತ್ತದೆ. ಇವರಿಂದಾಗಿ, ಸಾಮಾನ್ಯ ರೈತರು ಚಳವಳಿಯ ಚಟುವಟಿಕೆಗಳಲ್ಲಿ ಭಾಗವಹಿಸಲು ಕಾತುರರಾಗಿದ್ದರೂ, ಸಮರ್ಥವಾದ ಸ್ಥಳೀಯ ನಾಯಕರುಗಳ ಕೊರತೆ ಎದ್ದು ಕಾಣುತ್ತಿದೆ–ಕಾಡುತ್ತಿದೆ ಎಂದು ನನಗನ್ನಿಸಿದೆ.

ಆದ್ದರಿಂದ ಈ ಭಾಗದ ರೈತರ ಅಭಿಪ್ರಾಯಗಳನ್ನು ಅರ್ಥಮಾಡಿಕೊಂಡು, ಅವರ ಅನುಮಾನಗಳನ್ನು ಪರಿಹರಿಸಿ, ತಪ್ಪು ಅಭಿಪ್ರಾಯಗಳನ್ನು ತಿದ್ದಿ, ಸ್ಥಳೀಯ ಅಥವಾ ಮೇಲ್ಮಟ್ಟದ ನಾಯಕರುಗಳಲ್ಲಿರಬಹುದಾದ ನ್ಯೂನತೆಗಳನ್ನು ತಿದ್ದಿಕೊಂಡು ಇಲ್ಲೂ ಬಲಿಷ್ಠವಾದ ರೈತ ಸಂಘಟನೆ ಬೆಳೆಸಲು ರೈತ ಸಂಘಕ್ಕೆ ನಿಮ್ಮಗಳ ಸಹಕಾರ ಬೇಕಾಗಿದೆ (ಎಂದು ನಾನು ಭಾವಿಸಿದ್ದೇನೆ)

ಆ ಕಾರಣ, ರಾಜ್ಯ ರೈತ ಸಂಘ ಹಾಗೂ ರೈತ ಚಳುವಳಿ– ಇವುಗಳ ಬಗ್ಗೆ ನೀವು ಏನು–ಎಷ್ಟು ತಿಳಿದುಕೊಂಡಿದ್ದೀರಿ ಎಂಬುದನ್ನು ಎಂಟು–ಹತ್ತು ವಾಕ್ಯಗಳಲ್ಲಿ, ಅದಷ್ಟು ಸ್ಪಷ್ಟವಾಗಿ ಬರೆದು ಕಳುಹಿಸಿ. ಮುಖ್ಯವಾದ ಕೆಲವನ್ನು ಪ್ರಕಟಿಸಿ ಉಳಿದವ [illegible] ನಾಯಕರಿಗೆ ಕಳುಹಿಸುವ ಯೋಚನೆ ಮಾಡಿದ್ದೇನೆ.

[illegible] ನೂರೊಚ್ಚರಿ ಮನೆಗಳ [illegible] ಓದುಗರಲ್ಲಿ ಕನಿಷ್ಠ ನೂರು ಜನರಾದರೂ ಪ್ರತಿಕ್ರಿಯೆ ಕಳುಹಿಸುತ್ತೀರೆಂದು ನಂಬಿದ್ದೇನೆ. ಸ್ಥಳೀಯ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುವ ಎಲ್ಲರೂ ತಪ್ಪದೇ ಪ್ರತಿಕ್ರಿಯಿಸಿ. ನಿಮ್ಮ ಪತ್ರಗಳು ೨೫–೧೦–೮೩ ರೊಳಗೆ ನನ್ನ ಕೈ ಸೇರಲಿ.

ನಿಮ್ಮ
ಸಿರಿಮನೆ ನಾಗರಾಜ್.

ನೆಮ್ಮಾರು ಶಾಖಾ ಅಂಚೆ ಕಚೇರಿಗೆ

ದೂರವಾಣಿ ಬೇಕು

ಮಾನ್ಯರೆ,

ಶೃಂಗೇರಿ ತಾ|| **ನೆಮ್ಮಾರು ಶಾಖಾ ಅಂಚೆ ಕಚೇರಿಯಿಂದ** ಸುತ್ತ ಮುತ್ತಲಿನ ಸಹಸ್ರಾರು ಮಂದಿಗೆ ಗರಿಷ್ಠ ಪ್ರಯೋಜನ ಸಿಗುತ್ತಿದ್ದರೂ ಈ ಕಚೇರಿಗೆ ದೂರವಾಣಿ ಸೌಲಭ್ಯ ಕಲ್ಪಿಸಿಲ್ಲದ ಕಾರಣ ಸ್ಥಳೀಯ ಕರೆ, ದೂರಕರೆಗಳನ್ನು ಮಾಡುವ ಅಗತ್ಯ ಇರುವವರಿಗೆ ತೊಂದರೆ ಆಗಿದೆ. ದೂರವಾಣಿ ಇಲಾಖೆಯವರು ಈ ದಿಸೆಯಲ್ಲಿ ತುರ್ತು ಗಮನ ಹರಿಸಿ ನೆಮ್ಮಾರು ಉಪ ಅಂಚೆ ಕಛೇರಿಯ ಪ್ರಯೋಜನದಾರರಿಗೆ ಟೆಲಿಫೋನ್ ಸೌಲಭ್ಯವನ್ನೂ ಕಲ್ಪಿಸಿಕೊಡಬೇಕಾಗಿ ಕೋರುತ್ತೇನೆ.

—ಗಿರೀಶ್ ಮಾವಿನಕಾಸು.

ದಲಿತ ಚಿಂತಕನ ಅನಿಸಿಕೆಗಳು

(೨ ನೇ ಪುಟದಿಂದ)

ನೋಡಿದ ಮೇಲೆ ನನ್ನ ಈ ಸಂಕಲ್ಪ [illegible] ತಪ್ಪೆನ್ನಿಸಿತು. ಸ್ವಾತಂತ್ರ್ಯ [illegible] ರರು ಪ್ರೋಲೀಸನನ್ನು ಕೊಂದಾಗ, ನೆಹರೂ, ಪಟೇಲ್, ಜಿನ್ನಾರು ಬೇಡವೆಂದರೂ ಕೇಳದೆ ಗಾಂಧಿ ಉಪವಾಸ ಮಾಡಿ, ಚಳವಳಿ ಹಿಂತೆಗೆದುಕೊಂಡದ್ದು ನನ್ನನ್ನು ಬದಲಿಸಿತು. ಬೀಳ ನ್ಯಾಯಾಧೀಶ [illegible] ಗಾಂಧಿಗೆ ಎದ್ದು ನಿಂತನು. ನನಗಾಗ, ಅಹಿಂಸೆ ತಂತ್ರವಲ್ಲ, ಅದು ಬದುಕು ಅನ್ನಿಸಿತು.

ಸಾಯಲು ಮಾನಸಿಕವಾಗಿ [illegible] ಸಿದ್ಧನಾದವನು ಮಾತ್ರ ಗಾಂಧಿಯಾಗ ಬಲ್ಲ. ಅಹಿಂಸಾವಾದಿಯಾದ ಗಾಂಧಿಯ ದೇಹದ ಒಂದು ರೋಮದಲ್ಲೂ [illegible] ಸುಳಿವು ಕಾಣುವುದಿಲ್ಲ. [illegible] ಅಹಿಂಸಾವಾದಿಯಾಗುವುದು [illegible] ವೇನೋ. ಇಂಥ ಗಾಂಧಿಯನ್ನು [illegible] [illegible] ಅಥವಾ ನಮ್ಮ [illegible] ಆಗಬೇಕು.

ದಯವಿಟ್ಟು ನೋಡಿ!

[illegible]

ದೇವನೂರ ಮಹಾ[illegible]

...ಸ॥ ಕಾಡಿನಿಂದ ಸೊಪ್ಪು ಕಡಿದು ಮಾರಿದ ಆರೋಪ

ನಿಲುವಾಗಿಲು: ಕೊಪ್ಪ–ಆಗುಂಬೆ ರಸ್ತೆ ಯಿಂದ ಹೆಗ್ಗಾರು–ಹೆಗ್ಗದ್ದೆಗೆ ಹೋಗುವ ಪಂಚಾಯ್ತಿ ರಸ್ತೆಯ ಪಕ್ಕದಲ್ಲಿನ ಸುಮಾರು ...ಎಕ್ರೆ ಕಾಡು ಒಬ್ಬ ವ್ಯಕ್ತಿಯಿಂದ ನಾಶ ವಾಗುತ್ತಿದೆಯೆಂದು ಗ್ರಾಮದ ರೈತರು ತಿಳಿ ಸಿದ್ದಾರೆ. ಸುಮಾರು ೨೦ ಕುಟುಂಬಗಳಿಗೆ ಸೊಪ್ಪು, ಒಣಸೌದೆ ಒದಗಿಸುತ್ತಿದ್ದ ಈ ಕಾಡಿನಿಂದ ಇಪ್ಪತ್ತು ದಿನದಿಂದೀಚೆಗೆ ಈ ವ್ಯಕ್ತಿ ತೋಟದ ಸೊಪ್ಪು ಕಡಿದು ಮಾರು ತ್ತಿದ್ದು, ಮಾರುಕಟ್ಟೆಯಲ್ಲಿ ಸಿಗುವ ಯಾವು ದೇ ವಸ್ತುವನ್ನು ಕೊಂಡುಕೊಳ್ಳುವಂತೆ ಜನ ಇದನ್ನೂ ಕೊಳ್ಳುತ್ತಿದ್ದಾರೆಂದೂ ಸಂಬಂಧಪಟ್ಟವರು ಇದನ್ನು ತಡೆದು ಸುತ್ತ ಮುತ್ತಲ ರೈತರಿಗೆ ಅನುಕೂಲ ಮಾಡಿ ಕೊಡಬೇಕೆಂದೂ ರೈತರು ಕೋರಿದ್ದಾರೆ.

ಸರ್ಕಾರಿ ನೌಕರನ ಮೇಲೆ ಹಲ್ಲೆ: ಸಹೋದ್ಯೋಗಿಗಳ ಪ್ರತಿಭಟನೆ

ಕೊಪ್ಪ: ಜಯಪುರದ ಕೃಷಿ ಸಹಾಯಕ ...ಚಂದ್ರೇಗೌಡ ಅವರ ಮೇಲೆ ಅಗಳಗಂಡಿ ...ರು ಕೃಷ್ಣಮೂರ್ತಿ ಮತ್ತು ಇನ್ನೊಬ್ಬ ವ್ಯಕ್ತಿ ಅ. ೩ ಮತ್ತು ೪ ರಂದು ಅವಾಚ್ಯ ...ಗಳೊಂದಿಗೆ ಚಪ್ಪಲಿಯಿಂದ ಹೊಡೆ ...–ಒದ್ದು ಹಲ್ಲೆ ನಡೆಸಿದ್ದಾಗಿ ಇಲ್ಲಿನ ...ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ದೂರು ...ಂದಿದ್ದು, ಈ ಹಲ್ಲೆಗೆ ಪ್ರತಿಭಟನೆಯಾಗಿ ...ಅ. ಮಂ. ನೌಕರರು ಅ. ೫ ರಂದು ...ನ್ನು ಕೆಳಗಿಟ್ಟು" ಮುಷ್ಕರ ನಡೆಸಿದರು. ...ಹಲ್ಲೆಯ ಬಗ್ಗೆ ಕ್ಷೇತ್ರಾಭಿವೃದ್ಧಿ ಅಧಿ ...ರಿ ಕೆ. ಬಾಲಣ್ಣಗೌಡ ಅವರು ಶೃಂಗೇರಿ ...ಪೋಲೀಸರಿಗೆ ದೂರು ನೀಡಿದ್ದಾರೆ

ಗಾಂಧೀಜಯಂತಿಯಂದು ಮದ್ಯ–ಮಾಂಸ ಮಾರಾಟ: ಭಾಜಪಾ ವಿಷಾದ

ಕೊಪ್ಪ: "ಗಾಂಧೀ ಜಯಂತಿಯ ದಿನ ...ದರೂ ಎಲ್ಲಾ ಸಾರಾಯಿ–ಮದ್ಯ ಮತ್ತು ...ಮಾಂಸದ ಅಂಗಡಿಗಳನ್ನು ಮುಚ್ಚಬೇಕಾ ...ತ್ತದರೂ ಈ ವರ್ಷ ತಾಲ್ಲೂಕಿನ ಎಲ್ಲಾ ... ಅವುಗಳಲ್ಲಿ ಮಾಮೂಲಿ ವ್ಯವಹಾರ ...ಯಗೊಟ್ಟಿರುವುದು ಶೋಚನೀಯ. ...ವಿಶೇಷವಾಗಿ ಜನತಾ ಪಕ್ಷದ ಆಳ್ವಿಕೆ ರಾಜ್ಯ ... ಇರುವಾಗಲಂತೂ ಈ ರೀತಿ ನಡೆಯ ...ಬಾರದಿತ್ತು" ಎಂಬುದಾಗಿ ತಾ॥ ಬಾಜಪಾ ...ಅಧ್ಯಕ್ಷ ಬಿ. ಎಂ. ಜಗನ್ನಾಥ್ ಹೇಳಿಕೆ ...ಯೊಂದರಲ್ಲಿ ತಿಳಿಸಿದ್ದಾರೆ.

...ನ್ಯಾಯಕ್ಕೆ ಒತ್ತಾಯ

(...ನೇ ಪುಟದಿಂದ)

...ತೆ ನ್ಯಾಯವಾಗಿ ದಲಿತರಿಗೆ ಸಿಗಬೇ... ಭೂಮಿಯನ್ನು ದಲಿತರಿಗೇ ಹಂಚು... ಶೃಂಗೇರಿ ತಾ॥ ದಲಿತ ಸಂಘರ್ಷ ...ತಿ ಒತ್ತಾಯಿಸುತ್ತದೆ.

—ಕೆ. ಎಂ. ಗೋಪಾಲ,
ದಲಿತ ಸಂಘರ್ಷ ಸಮಿತಿ, ಶೃಂಗೇರಿ.

ಅಧ್ಯಾಪಕರಿಗೆ ಸನ್ಮಾನ

ಶಾನುವಳ್ಳಿ: ಇಲ್ಲಿಗೆ ಸಮೀಪದ ಕೊಡೂರು ಶಾಲೆಯಲ್ಲಿ ೧೪ ವರ್ಷ ಉಪಾಧ್ಯಾಯರಾಗಿದ್ದು ನಿಲುವಾಗಿಲು ಶಾಲೆಗೆ ವರ್ಗವಾಗಿರುವ ಕೆ. ಎಂ. ಶೇಷಪ್ಪ ನಾಯ್ಕರನ್ನು ಬಿ.ಎಸ್.ಸದಾಶಿವ ಭಟ್ಟರ ಅಧ್ಯಕ್ಷತೆಯಲ್ಲಿ ಈಡಿಗೆ ನಡೆದ ಸಮಾರಂಭದಲ್ಲಿ ಸ॥ ಶಿಕ್ಷಣಾಧಿಕಾರಿ ಹೆಚ್.ಎಂ. ಮಲ್ಲಯ್ಯ ಸನ್ಮಾನಿಸಿದರು. ಶಾನುವಳ್ಳಿ ಪಂ. ಅಧ್ಯಕ್ಷ ಎಂ. ವಿ. ಸೀನಪ್ಪಗೌಡ ಮುಖ್ಯ ಅತಿಥಿಗಳಾಗಿದ್ದರು.

(ವರದಿ: ಎಸ್. ಸಿ. ರಾಮಣ್ಣ.)

ಬೇಗಾರು ಸಹ॥ ಸಂಘದ ಅಧ್ಯಕ್ಷರಾಗಿ ಹೂವಪ್ಪಗೌಡ ಪುನರಾಯ್ಕೆ

ಬೇಗಾರು: ಇಲ್ಲಿನ ವ್ಯವಸಾಯ ಸೇವಾ ಸಹಕಾರ ಸಂಘಕ್ಕೆ ೧೯೮೩–೮೪ನೇ ಸಾಲಿಗೆ ಅಧ್ಯಕ್ಷರಾಗಿ ಎ.ಎಂ.ಹೂವಪ್ಪಗೌಡ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಈ ಕೆಳಕಂಡವರು ನೂತನ ಸಾಲಿಗೆ ಸದಸ್ಯರು: ಹೆಚ್.ಎಸ್.ಚಂದ್ರಶೇಖರ, ಕೆ. ಜಿ. ನರಸಿಂಹ ಮೂರ್ತಿ, ಬಿ. ಜಿ. ಮಂಜುನಾಥ, ಕೆ.ಎ.ರಾಮಸ್ವಾಮಿ, ಹೆಚ್.ಎಲ್.ದೇವಪ್ಪಗೌಡ, ಬಿ. ವಿ. ಕೃಷ್ಣಮೂರ್ತಿ, ಟಿ. ಟಿ. ಅಣ್ಣಪ್ಪಗೌಡ, ಮತ್ತು ಐಯಗೌಡ.

(ವರದಿ: ಎಸ್. ಕೆ. ಶೃಂಗೇಶ್ವರ.)

ಪುಸ್ತಕ ಭಂಡಾರ ಉದ್ಘಾಟನೆ

ಅಗಳಗಂಡಿ: ಇಲ್ಲಿಗೆ ಸಮೀಪದ ಅರೆಹಳ್ಳದ ಶಾರದಾ ಕಲಾ ಸಂಘದ ಆಶ್ರಯದಲ್ಲಿ ಕೊಪ್ಪ ತಾ.ಅ.ಮಂ.ಮಾಜಿ ಸದಸ್ಯ ಎ. ರಾಮಚಂದ್ರ ರಾವ್ ಅಧ್ಯಕ್ಷತೆಯಲ್ಲಿ ಗಾಂಧೀ ಜಯಂತಿ ಆಚರಿಸಲಾಯ್ತು. ಇದೇ ಸಂದರ್ಭದಲ್ಲಿ ಶಾರದಾ ಪುಸ್ತಕ ಭಂಡಾರವನ್ನು ಎ.ಎಸ್.ಕೃಷ್ಣದೇವರಯ್ಯ ಉದ್ಘಾಟಿಸಿದರು. ಎ. ಆರ್. ರಾಧಾಕೃಷ್ಣ ಸ್ವಾಗತಿಸಿ, ಬಲೆಗೋಡು ನಾಗೇಶ್ ವಂದಿಸಿದರು. ಅಂಗನವಾಡಿಯ ಮಕ್ಕಳು ಮತ್ತು ಕಲಾ ಸಂಘದವರಿಂದ ಮನರಂಜನೆ ಕಾರ್ಯಕ್ರಮ ನಡೆಯಿತು. (ವರದಿ: ಅ. ರಾ. ರಾ.)

ರಾಜ್ಯ ೪ನೇ ದರ್ಜೆ ನೌಕರರ ಸಂಘದಿಂದ ತಹಸೀಲ್ದಾರ್‌ಗೆ ಬೀಳ್ಕೊಡಿಗೆ

ಕೊಪ್ಪ: ಇಲ್ಲಿಂದ ಚಿಕ್ಕಮಗಳೂರಿಗೆ ವರ್ಗವಾಗಿರುವ ತಹಸೀಲ್ದಾರ ಹ.ಮಾ. ನಾಗಪ್ಪ ಅವರನ್ನು ಬೀಳ್ಕೊಡುವ ಮತ್ತು ನೂತನ ತಹಸೀಲ್ದಾರ್ ಕರೀಗೌಡ ಅವರನ್ನು ಸ್ವಾಗತಿಸುವ ಕಾರ್ಯಕ್ರಮವನ್ನು ರಾಜ್ಯ ೪ನೇ ದರ್ಜೆ ನೌಕರರ ಸಂಘ ಈಚೆಗೆ ಏರ್ಪಡಿಸಿತ್ತು. ಕಾರ್ಯದರ್ಶಿ ಪಿ. ವಿ. ಶೇಷಗಿರಿ ಸ್ವಾಗತಿಸಿದರು. ಅಧ್ಯಕ್ಷ ಬಿ. ಎನ್. ಚಂದ್ರಶೇಖರ್ ವಂದನಾರ್ಪಣೆ ಮಾಡಿದರು

ಕೊಪ್ಪದ ಪ್ರ. ದ.ಕಾಲೇಜಿನಲ್ಲಿ ವಿದ್ಯಾರ್ಥಿ ರೈತ ಸಮಿತಿ ಇಲ್ಲ

ಕೊಪ್ಪ: ನಮ್ಮ ೨-೧೦-೮೩ರ ಸಂಚಿಕೆಯ 'ಕೊಪ್ಪ ಪ್ರ. ದ. ಕಾಲೇಜಿನಲ್ಲಿ ವಿದ್ಯಾರ್ಥಿ ರೈತ ಸಮಿತಿ' ಎಂಬ ವರದಿಗೆ ಪ್ರತಿಕ್ರಿಯೆಯಾಗಿ, "ಈ ಕಾಲೇಜಿನಲ್ಲಿ ಅಂತಹ ಯಾವುದೇ ಸಮಿತಿಗಳಿಲ್ಲ" ಎಂಬುದಾಗಿ ಪ್ರಾಂಶುಪಾಲರು ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ. —ಸಂ.

ಲಯನ್ಸ್ ಲೇಡೀಸ್ ಆಕ್ಸಿಲರಿ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್‌ನಲ್ಲಿ ಲಯನ್ಸ್ ಮಹಿಳಾ ವಿಭಾಗವಾದ ಲಯನ್ ಲೇಡೀಸ್ ಆಕ್ಸಿಲರಿ ಅ. ೨ ರಂದು ಆರಂಭಗೊಂಡಿತು. ಅದರ ಅಧ್ಯಕ್ಷೆಯಾಗಿ ನಿರ್ಮಲಾ ಜಗನ್ನಾಥ ಶೆಟ್ಟಿ ಹಾಗೂ ಕಾರ್ಯದರ್ಶಿಯಾಗಿ ಜಯಶ್ರೀ ಮೋಹನ ಶೆಟ್ಟಿ ಸರ್ವಾನುಮತದಿಂದ ಆಯ್ಕೆಯಾದರು.

ಗಾಂಧೀ ಜಯಂತಿ

ಲಯನ್ಸ್ ಕ್ಲಬ್ಬಿನ ಆಶ್ರಯದಲ್ಲಿ ಗಾಂಧೀ ಜಯಂತಿಯ ಅಂಗವಾಗಿ ಅಂದು ಗಾರಿನಲ್ಲಿ ಹರಿಜನರಿಗೆ ಪ್ಲಾಸ್ಟಿಕ್ ಬಕೆಟ್‌ಗಳನ್ನು ಹಂಚಲಾಯಿತು. ಮನಮೋಹನ ಕಲ್ಲೆ ಅಧ್ಯಕ್ಷತೆ ವಹಿಸಿದ್ದು, ಡಾ॥ ಶಾಸಭಾಗರು 'ಮಾದಕ ವಸ್ತುಗಳ ಚಟದ ದುಷ್ಪರಿಣಾಮ'ಗಳ ಬಗ್ಗೆ ಮಾತನಾಡಿದರು. ಟಿ. ಎ. ಪಿಂಟೋ ವಂದಿಸಿದರು.

ರಾ. ಸ್ವ. ಸಂಘ ಜಿಲ್ಲಾ ಮಟ್ಟದ ಪ್ರಾಥಮಿಕ ಶಿಕ್ಷಾವರ್ಗದ ಸಮಾರೋಪ

ಕಳಸ: ಇಲ್ಲಿ ಅ. ೪ ರಿಂದ ನಡೆಯುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಮಟ್ಟದ ಪ್ರಾಥಮಿಕ ಶಿಕ್ಷಾವರ್ಗದ ಸಮಾರೋಪ ಸಮಾರಂಭ ಅ. ೧೦ ರಂದು ಬಿ. ಎಂ. ಭದ್ರೇಗೌಡರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ನ. ಕೃಷ್ಣಪ್ಪ ಮುಖ್ಯ ಅತಿಥಿಗಳು. ಸಂಜೆ ೪ ಗಂಟೆಗೆ ಪೇಟೆಯ ಮುಖ್ಯ ಬೀದಿಗಳಲ್ಲಿ ಪಥ ಸಂಚಲನ ನಡೆಯುತ್ತದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್. ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ